

# ಕೊಚ್ಚಿನ್ ಎಂಬ ಚೆಲುವೆ..




ಬೋಲ್‌ಗಾಟ್ಟಿ ಅರಮನೆ



■ ಚಿತ್ರ– ಲೇಖನ:
**ಹರೀಶ್ ಹಳೆಮನೆ**

ಕೇರಳದ ವಾಣಿಜ್ಯ ರಾಜಧಾನಿ ಎರ್ನಾಕುಳಮ್ ಅಥವಾ ಕೊಚ್ಚಿ (ಕೊಚ್ಚಿನ್) 'ಅರಬೀ ಸಮುದ್ರದ ರಾಣಿ' ಎಂಬ ಹೆಸರಿನಿಂದಲೇ ಪ್ರಸಿದ್ಧವಾದ ನಗರ. 'ಸ್ಮಾರ್ಟ್ ಸಿಟಿ' ಕೂಡ ಆಗಿದ್ದರಿಂದ ಟೆಕ್ಕೀಗಳನ್ನೂ, ಪ್ರವಾಸಿಗರನ್ನೂ ಆಕರ್ಷಿಸುತ್ತಿದೆ.

ಬೋಲ್‌ಗಾಟ್ಟಿ ದ್ವೀಪ ಎರ್ನಾಕುಳಂ ನಗರದ ಹೊರವಲಯದಲ್ಲಿರುವ ಒಂದು ಚಿಕ್ಕ ದ್ವೀಪ. ಈ ದ್ವೀಪಕ್ಕೆ 'ಮುಳವುಕ್ಕಾಡ್' ಎಂಬ ಸ್ಥಳೀಯ ಹೆಸರೂ ಇದೆ. ಡಚ್ಚರಿಂದ ನಿರ್ಮಿತ 'ಬೋಲ್‌ಗಾಟ್ಟಿ ಅರಮನೆ' ಕ್ರಮೇಣ ಬ್ರಿಟಿಷರಿಂದ ಅಭಿವೃದ್ಧಿ ಹೊಂದಿತು. ಇದು ಇಲ್ಲಿನ ಮುಖ್ಯ ಆಕರ್ಷಣೆ ಕೂಡ. ಡಚ್ ಹಾಗೂ ಇಂಗ್ಲಿಷ್ ವಾಸ್ತು ಶೈಲಿಯ ಪ್ರಭಾವ ಈ ಅರಮನೆಯ ನಿರ್ಮಾಣದಲ್ಲಿ ಕಾಣಬಹುದು. ಇದೀಗ ಕೇರಳ ಪ್ರವಾಸೋದ್ಯಮ ಇಲಾಖೆಯಿಂದ (ಕೆಟಿಡಿಸಿ) ನಡೆಸಲ್ಪಡುವ 'ಹೆರಿಟೇಜ್ ಹೊಟೇಲ್' ಆಗಿದೆ. ಗಣ್ಯರು ಉಳಿದುಕೊಳ್ಳುವ ಸಂದರ್ಭಗಳಲ್ಲಿ ಈ ಅರಮನೆಗೆ ಪ್ರವಾಸಿಗರಿಗೆ ಪ್ರವೇಶ ನಿಷಿದ್ಧ.

ಬೋಲ್‌ಗಾಟ್ಟಿ ದ್ವೀಪದಲ್ಲಿ ಅರಮನೆಯ ಸಮೀಪ ಗಾಲ್ಫ್ ಕೋರ್ಟ್, ಮಕ್ಕಳ ಪಾರ್ಕ್ ಕೂಡ. ದ್ವೀಪದಿಂದ ಸೂರ್ಯಾಸ್ತಮಾನದ ದೃಶ್ಯ ನಯನಮನೋಹರ. ಕೋನಾಟ್ಟು ತಂಬುರಾನ್ ಅಥವಾ ಕೋನಾಟ್ಟು ಪರದೇವತಾ ಎಂಬ ದೇವರನ್ನು ಪೂಜಿಸುವ ಶ್ರೀ ಕೋನಾಟ್ಟು ದೇವಾಲಯವೂ ಇಲ್ಲಿದೆ.

ಕೊಚ್ಚಿಯನ್ನು ಸಂದರ್ಶಿಸುವ ದೇಸೀ ಹಾಗೂ ವಿದೇಶೀ ಪ್ರವಾಸಿಗರು ಹೆಚ್ಚಾಗಿ ಈ ದ್ವೀಪವನ್ನು ಹಾಗೂ ಅರಮನೆಯನ್ನು ಸಂದರ್ಶಿಸಲು ಬರುತ್ತಾರೆ. ಈ ದ್ವೀಪಕ್ಕೆ ಹೋಗಲು ಫೆರಿ ಅಥವಾ ಬೋಟ್ ವ್ಯವಸ್ಥೆ ಇದೆ. ಇನ್ನೊಂದು ಮಾರ್ಗವಾಗಿ ಅಟೋರಿಕ್ಷಾ ಮೂಲಕವೂ ಪ್ರವೇಶಿಸಬಹುದು. ಫೆರಿಯ ಮೂಲಕ ಕೊಚ್ಚಿಯ 'ಮರೀನ್ ಡ್ರೈವ್'ನ ಸುಂದರ ದೃಶ್ಯ ಕಾಣಸಿಗುತ್ತದೆ.

ಇದಲ್ಲದೆ ಸಮೀಪದ ಮಟ್ಟಾಂಚೇರಿ ಎಂಬಲ್ಲಿ ಇನ್ನೊಂದು ಡಚ್ ಅರಮನೆಯಿದೆ. ಮಟ್ಟಾಂಚೇರಿ ಡಚ್ ಪ್ಯಾಲೇಸ್ ಎಂಬ ಹೆಸರಿನ ಈ ಅರಮನೆಯನ್ನು ಪೋರ್ಚುಗೀಸರು ನಿರ್ಮಿಸಿ ಕೊಚ್ಚಿಯ ಅರಸನಿಗೆ ಕೊಡುಗೆಯಾಗಿ ನೀಡಿದ್ದರು. ಇದನ್ನು ಡಚ್ಚರು ವಶಪಡಿಸಿಕೊಂಡು ಪುನರ್ ನಿರ್ಮಾಣ ಮಾಡಿದ ಕಾರಣ ಡಚ್ ಅರಮನೆಯೆಂದೇ ಹೆಸರು ಗಳಿಸಿತು. ಈ ಅರಮನೆಯ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತಗಳ ಮ್ಯೂರಲ್ ಚಿತ್ರಗಳನ್ನು ಕಾಣಬಹುದು.

ಫೋರ್ಟ್ ಕೊಚ್ಚಿ ಪ್ರದೇಶದಲ್ಲಿ ಈಗಲೂ ಹಳೆಯ ವಸಾಹತುಗಳ ಅವಶೇಷಗಳಿವೆ. ಪೋರ್ಚುಗೀಸರು 16ನೇ ಶತಮಾನದಲ್ಲಿ ನಿರ್ಮಿಸಿದ ಸೈಂಟ್ ಫ್ರಾನ್ಸಿಸ್ ಚರ್ಚ್ ಈಗಲೂ ಉತ್ತಮ ಸ್ಥಿತಿಯಲ್ಲಿದೆ. ಹಿಂದೆ ವಾಸ್ಕೋ–ಡ–ಗಾಮ ಬಂದಿಳಿದ ಅಂಜುತೆಂಜು ಪ್ರದೇಶವೂ ಕೊಚ್ಚಿಗೆ ಸಮೀಪದಲ್ಲಿದೆ. ಅಂಜುತೆಂಜು ಕೋಟೆಯೂ ಪ್ರಸಿದ್ಧವಾಗಿದೆ. ಡ–ಗಾಮನ ಸಮಾಧಿಯೂ ಫೋರ್ಟ್ ಕೊಚ್ಚಿಯಲ್ಲಿದೆ.

ಸಂಬಾರ ಮಾರುಕಟ್ಟೆ: ವಿಶ್ವದ ಅತಿ ಹಳೆಯದಾದ ಸಂಬಾರ ಮಾರುಕಟ್ಟೆ ಕೊಚ್ಚಿ ನಗರದಲ್ಲಿದೆ. ಪೋರ್ಚುಗೀಸರು, ಅರಬ್ಬರು, ಫ್ರೆಂಚರು ಇಲ್ಲಿಗೆ ಬರಲು ಪ್ರಮುಖ ಕಾರಣವೇ ಈ ಸಾಂಬಾರ ಪದಾರ್ಥಗಳು. ಹಾಗಾಗಿ ಕಾಳುಮೆಣಸು, ಲವಂಗ, ಏಲಕ್ಕಿ, ಜಾಯಿಕಾಯಿ, ಕುಡಂಪುಳಿ, ಅಡಕೆ, ಅರಸಿನ ಮುಂತಾದ ವಿವಿಧ ಬಗೆಯ ಮಸಾಲೆ ಪದಾರ್ಥಗಳ ಮಾರುಕಟ್ಟೆಯನ್ನಿಲ್ಲಿ ಕಾಣಬಹುದು.

'ಚೈನೀಸ್ ಫಿಶಿಂಗ್ ನೆಟ್ಸ್' ಚೀನಾದ ಮೀನುಗಾರಿಕಾ ತಂತ್ರಜ್ಞಾನ. 14ನೇ